ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ____________

ಪತ್ರಿಕೆಯ ಹೆಸರು : NAME OF THE NEWS PAPER: ____________ ದಿನಾಂಕ : DATE : 6/6/20

# ಯುಪಿಎಸ್‌ಸಿ ಪರೀಕ್ಷಾ ವೇಳಾಪಟ್ಟಿ ಪ್ರಕಟ

**ನವದೆಹಲಿ:** ಕೇಂದ್ರ ಲೋಕ ಸೇವಾ ಆಯೋಗ (ಯುಪಿಎಸ್‌ಸಿ) ವಾರ್ಷಿಕ ಪರೀಕ್ಷೆ ಕ್ಯಾಲೆಂಡರ್ ಹಾಗೂ ಪರಿಷ್ಕೃತ ವೇಳಾಪಟ್ಟಿಯನ್ನು ಶುಕ್ರವಾರ ಪ್ರಕಟಿಸಿದೆ. ನಾಗರಿಕ ಸೇವೆಗಳು, ಎನ್‌ಡಿಎ, ಸಿಎಂಎಸ್ ಮತ್ತು ಇತರ ಪರೀಕ್ಷೆಗಳು ಈ ವೇಳಾಪಟ್ಟಿ ಅನ್ವಯ ನಡೆಯಲಿವೆ. ಯುಪಿಎಸ್‌ಸಿ ಸಿಎಸ್‌ಇ ಅಥವಾ ಐಎಎಸ್ ಪ್ರಿಲಿಮ್ಸ್ 2020ನ್ನು ಅಕ್ಟೋಬರ್ 4ರಂದು ನಡೆಸಲಾಗುವುದು. ಸೆಪ್ಟೆಂಬರ್‌ನಲ್ಲಿ ನಡೆಯಬೇಕಿದ್ದ ಯುಪಿಎಸ್‌ಸಿ ಮುಖ್ಯ ಪರೀಕ್ಷೆಯನ್ನು (ಮೇನ್ಸ್) 2021ರ ಜನವರಿ 8ಕ್ಕೆ ಮುಂದೂಡಲಾಗಿದೆ. ಮುಂದೂಡಲಾಗಿರುವ ಯುಪಿಎಸ್‌ಸಿ ಎನ್‌ಡಿಎ/ಎನ್‌ಎ-1 ಪರೀಕ್ಷೆ 2020 ಸೆಪ್ಟೆಂಬರ್ 6ರಂದು ನಡೆಯಲಿದೆ.